ಓ.ಎಸ್. ನಂ. 120/2017 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 13.11.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1(ಎ) ರಿಂದ 1(ಸಿ) ಪರ ಶ್ರೀ ಡಿ.ಡಿ.ಬಿ ವಕೀಲರಿಂದಃ**

ನಿಡಿ69 ರಲ್ಲಿರುವ ಮನೆಯು ನಾನು ಮತ್ತು ನನ್ನ ಹೆಂಡತಿ ವಾಸವಾಗಿರುವ ಮನೆ ಎಂದರೆ ಸರಿ. ಸದರಿ ಮನೆಯನ್ನು ಜಂಜರ್ ನಂ.105, ಸ್ವತ್ತಿನ ಸಂಖ್ಯೆ 105 ರಲ್ಲಿ ಕಟ್ಟಲಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದು ನನ್ನ ಸ್ವಯಾರ್ಜಿತ ಆಸ್ತಿ ಎನ್ನುವರು. ನಿಡಿ70 ರಲ್ಲಿರುವ ಮನೆಯಲ್ಲಿ 2 ನೇ ವಾದಿಯು ವಾಸವಾಗಿರುತ್ತಾರೆ ಎಂದರೆ ಸರಿ. ನಿಡಿ71 ರಲ್ಲಿರುವ ಮನೆಯಲ್ಲಿ 6 ನೇ ವಾದಿಯು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಮನೆಯನ್ನು ಸ್ವತ್ತಿನ ಸಂಖ್ಯೆ105/1, ಜಂಜರ್ ನಂ.105 ರಲ್ಲಿ ಕಟ್ಟಿರುವ ಮನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ72 ರ ಮಧ್ಯಭಾಗದಲ್ಲಿ ಕಿಟಕಿ ಇರುವ ಮನೆಯು 5 ನೇ ವಾದಿಯು ವಾಸವಾಗಿರುವ ಎಂದರೆ ಸರಿಯಲ್ಲ. ನಾನು ಮತ್ತು 6 ನೇ ವಾದಿಯು ನನ್ನ ತಂದೆಯ ಪಾಲಿಗೆ ಬಂದಿರುವ ಆಸ್ತಿಯಲ್ಲಿ ಮನೆ ಕಟ್ಟಿರುತ್ತೇವೆ ಎಂದರೆ ಸಯಲ್ಲ. ಯಾವಾಗ ಮನೆಗಳನ್ನು ಕಟ್ಟಿರುತ್ತೀರಿ ಎಂದರೆ ಸಾಕ್ಷಿದಾರರು 5-6 ವರ್ಷಗಳ ಹಿಂದೆ ಗ್ರಾಮ ಪಂಚಾಯಿತಿಯಿಂದ ಮನೆ ಮಂಜೂರಾಗಿದ್ದು ಸದರಿ ಸಮಯಲ್ಲಿ ಕಟ್ಟಿರುತ್ತೇವೆ ಎನ್ನುವರು. ನಿಡಿ69 ರಿಂದ ನಿಡಿ71 ರಲ್ಲಿ ಕಂಡು ಬರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ಚಿಕ್ಕಪ್ಪನಾದ ನಂಜಪ್ಪ ರವರು ದಿನಾಂಕ 21.6.2001 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ದಿನಾಂಕ 26.8.2009 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ನಂಜಪ್ಪ ತೀರಿಕೊಂಡ ನಂತರ ನನ್ನ ತಂದೆ ಬದುಕಿದ್ದಾಗ ನಂಜಪ್ಪನ ಹೆಂಡತಿ ಮಕ್ಕಳು ಸರ್ವೆ ನಂ.14 ರಲ್ಲಿ 1 ಎಕರೆ, ಸರ್ವೆ ನಂ.66 ರಲ್ಲಿ 2-07 ಎಕರೆ ಜಮೀನಿನ ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಪೌತಿ ಖಾತೆ ಮಾಡಿಸಿಕೊಂಡಿರುವ ವಿಚಾರ ನನ್ನ ತಂದೆಗೂ ಸಹ ಗೊತ್ತಿತ್ತು ಎಂದರೆ ಸರಿಯಲ್ಲ. ನಿಮ್ಮ ತಂದೆಯ ಪಾಲಿಗೆ ಬಂದಿರುವ ಸರ್ವೆ ನಂ.14/1 ರ 1 ಎಕರೆಯಲ್ಲಿ ಯಾವಾ ಬೆಳೆ ಬೆಳೆದಿರುತ್ತೀರಿ ಎಂದರೆ ಸಾಕ್ಷಿದಾರರು ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದೇವೆ ಎನ್ನುವರು. ನಿಡಿ69 ರಿಂದ ನಿಡಿ71 ರಲ್ಲಿ ಹೇಳಿರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸದೇ ಬೇರೆಯವರ ಪಾಲಿಗೆ ಸೇರಿರುವ ಆಸ್ತಿಯಲ್ಲಿ ಪಾಲು ಕೇಳಿರುವುದಕ್ಕೆ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.